ಪಿಡಬ್ಲ್ಯೂ -1

ಇಂದು ದಿ. 16-11-2023 ರಂದು ಸಾಕ್ಷಿಗೆ ಪ್ರಮಾಣವಚನ ಬೋಧೀಸಲಾಯಿತು.

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದ.

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರ ರೂಪದಲ್ಲಿ ಸಲ್ಲಿಸಿದ್ದು, ಅದರಲ್ಲಿನ ಎಲ್ಲಾ ಅಂಶಗಳನ್ನು ಓದಿ ತಿಳಿದುಕೊಂಡು ಅದಕ್ಕೆ ಸಹಿ ಮಾಡಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ.

ನಾನು ನನ್ನ ಅರ್ಜಿಯ ಜೊತೆ ನನ್ನ ಜಾಗಕ್ಕೆ ಸಂಬಂಧಿಸಿದ ಸರ್ವೆ ನಂ.109/1, ಮುಸ್ತಿಗರಹಳ್ಳಿ ಗ್ರಾಮ, ಜಗಳೂರು ತಾಲ್ಲೂಕಿನ ಪಹಣಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.1 ಎಂದು, ಉಪನೋಂದಣಾಧಿಕಾರಿಗಳು ಜಗಳೂರು ಇವರು ನೀಡಿದ ಮಾರುಕಟ್ಟೆ ಮೌಲ್ಯ ದರ ಪಟ್ಟಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.2 ಎಂದು ಗುರುತಿಸಲಾಯಿತು. ಈ ದಾಖಲೆಗಳ ಆಧಾರದ ಮೇಲಿಂದ ನಾನು ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಬೇಕಾಗಿ ವಿನಂತಿಯಿರುತ್ತದೆ.

ಪಾಟೀಸವಾಲುಃ - ಎದುರುದಾರರ ಪರ ವಕೀಲರಿಂದ ಃ

(ಈ ಹಂತದಲ್ಲಿ ಎದುರುದಾರ ಪರ ವಕೀಲರು ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಗಿರುತ್ತದೆ.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಾಗಿದೆ

2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.